ದಿನಾಂಕ **19-08-2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ.ಎನ್.ಕೆ.ಡಿ ಪ್ರತಿವಾದಿಗಳ ಪರ ವಕೀಲರಿಂದಃ-**

1. ನನಗೆ ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಯಾರ ಮೇಲೆ ದಾವೆ ಹಾಕಿದ್ದಾರೆ ಎಂದರೆ ಅಜ್ಜಪ್ಪ ಮತ್ತು ಅಜ್ಜಪ್ಪನ ಮಕ್ಕಳ ಮೇಲೆ ದಾವೆ ಹಾಕಿರುತ್ತಾರೆ. 1 ನೇ ಪ್ರತಿವಾದಿ ನನಗೆ ಪರಿಚಯವಿದೆಯಾ ಎಂದರೆ ಇಲ್ಲ. ನಾನು ಅಜ್ಜಪ್ಪನ ಮಕ್ಕಳನ್ನು ನೋಡಿಲ್ಲ.

2. ನಿಪಿ 1 ರಲ್ಲಿ ಸಹಿ ಮಾಡಿದಾಗ ನನ್ನ ಹೆಸರು, ನನ್ನ ತಂದೆ ಹೆಸರು ಮತ್ತು ವಯಸ್ಸು ನಮೂದು ಮಾಡಿಲ್ಲ ಎಂದರೆ ಗೊತ್ತಿಲ್ಲ. ನಾನು ಸಹಿ ಹಾಕಿದ್ದೇನೆ. ಪ್ರವಾದಿಯರು ಹುಲ್ಲಪ್ಪನಹಳ್ಳಿಯಲ್ಲಿ ಯಾವಾಗದರೂ ವಾಸ ಇದ್ದರಾ ಎಂದರೆ ಇಲ್ಲ. ನಾನು ಮುನಿಯಪ್ಪನ ಮಗ ಮುನಿವೆಂಕಟಪ್ಪ ಎಂದು ನೋಡಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ.

3. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ ವಿಚಾರ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರ ಬರೆಯುವುದಕ್ಕೆ ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಯನ್ನು ಮೊದಲನೇ ಬಾರಿಗೆ ಕೈವಾರ ಕ್ರಾಸ್ ನಲ್ಲಿ ಭೇಟಿ ಮಾಡಿದೆ. ಯಾವಾಗ ಭೇಟಿ ಆಗಿದ್ದೆ ಎಂದರೆ 20 ವರ್ಷ ಮೇಲೆ ಆಗಿರುತ್ತದೆ. ನಾನು 1 ನೇ ಪ್ರತಿವಾದಿಯನ್ನು 2002 ನೇ ಸಾಲಿನಲ್ಲಿ ಭೇಟಿ ಆಗಿದ್ದೇನಾ ಎಂದರೆ ಇಲ್ಲ.

4. ನಾನು 20 ವರ್ಷಗಳ ಹಿಂದೆ ಕೈವಾರ ಕ್ರಾಸ್ ನಲ್ಲಿ 1 ನೇ ಪ್ರತಿವಾದಿಯನ್ನು ಭೇಟಿ ಮಾಡಿದಾಗ ನನ್ನ ಜೊತೆ ನಾರಾಯಣಪ್ಪ, ಶ್ರೀರಾಮಪ್ಪ, ವೆಂಕಟರಾಯಪ್ಪ, ಅಜ್ಜಪ್ಪ, ಅಜ್ಜಪ್ಪನ

ಮಕ್ಕಳು, ಕೊಂಗನಹಳ್ಳಿಯಿಂದ ಯಾರೋ ಇಬ್ಬರು ಇದ್ದರು. ಆ ದಿನ ಜಮೀನಿನ ಬಗ್ಗೆ ರೂ 69 ಸಾವಿರದ ವ್ಯಾಪಾರ ಆಗಿತ್ತು. ಎಷ್ಟು ಹಣ ಕೊಟ್ಟರು ಎಂದರು ಮುಂಗಡ ಹಣ ಕೊಟ್ಟಿದ್ದನ್ನು ನಾನು ನೋಡಿಲ್ಲ. ನಾನು ಕೈವಾರ ಕ್ರಾಸ್ ನಲ್ಲಿ ಸಹಿ ಹಾಕಿದಿರಾ ಎಂದರೆ ತಾಲ್ಲೂಕು ಕಚೇರಿಯಲ್ಲಿ ಕರಾರು ಪತ್ರಕ್ಕೆ ಸಹಿ ಹಾಕಿರುತ್ತೇನೆ.

5. ಕೈವಾರ ಕ್ರಾಸ್ ನ ಹತ್ತಿರ ಪತ್ರ ಬರವಣಿಗೆ ಏನಾದರೂ ಆಯಿತಾ ಎಂದರೆ ಇಲ್ಲ. ಕರಾರು ಪತ್ರವನ್ನು ಯಾರು ಬರೆಸಿದರೂ ಎಂದರೆ ತಾಲ್ಲೂಕು ಕಚೇರಿಯಲ್ಲಿ ಟೈಪ್ ಮಾಡಿಸಿ ಅದಕ್ಕೆ ಸಹಿ ಮಾಡಿರುತ್ತೇನೆ. ಕರಾರು ಪತ್ರವನ್ನು ಯಾರು ಮಾಡಿಸಿದರೂ ಎಂದರೆ ವೆಂಕಟರಾಯಪ್ಪ ಮತ್ತು ಅಜ್ಜಪ್ಪನವರು ಸೇರಿ ಮಾಡಿಸಿದ್ದರು. ನಿಪಿ 1 ನ್ನು ತಾಲ್ಲೂಕು ಕಚೇರಿಯ ಹೊರಗಡೆ ಟೈಪು ಮಾಡಿಸಿದರಾ ಅಥವಾ ಒಳಗಡೆ ಮಾಡಿಸಿದರಾ ಎಂದರೆ ಆಚೆ ಮಾಡಿಸಿದರು. ಬೆರಳಚ್ಚು ಮಾಡಿದರಾ ಅಥವಾ ಗಣಕೀಕೃತ ಮಾಡಿದರಾ ಎಂದರೆ ನನಗೆ ಗೊತ್ತಿಲ್ಲ.

6. ಕೈವಾರ ಕ್ರಾಸ್ ನ ಹತ್ತಿರ ವ್ಯಾಪಾರ ಆದ ಮೇಲೆ ಎಷ್ಟು ದಿನಕ್ಕೆ ತಾಲ್ಲೂಕು ಕಚೇರಿಯಲ್ಲಿ ಸಹಿ ಮಾಡಿದಿರಿ ಎಂದರೆ 2-3 ದಿನ ಆಗಿತ್ತು. ನಿಪಿ 1 ನ್ನು ಟೈಪ್ ಮಾಡಿಸಿದ ದಿನಾಂಕ ನನಗೆ ಗೊತ್ತಿಲ್ಲ. ನಿಪಿ 1 ನ್ನು ತಯಾರು ಮಾಡಿದಾಗ ತಾಲ್ಲೂಕು ಕಚೇರಿಗೆ ಯಾರು ಯಾರು ಬಂದಿದ್ದರು ಎಂದರೆ ನಾರಾಯಣಪ್ಪ, ವೆಂಕಟರಾಯಪ್ಪ, ಅಜ್ಜಪ್ಪ ಎಲ್ಲರೂ ಸೇರಿ ಬಂದಿದ್ದರು. ಆ ದಿನ ಎಷ್ಟು ಕ್ರಯದ ಕರಾರು ಪತ್ರಗಳಿಗೆ ಸಹಿ ಮಾಡಿದ್ದೀರಿ ಎಂದರೆ ಒಂದಕ್ಕೆ ಮಾತ್ರ ಮಾಡಿರುತ್ತೇನೆ ಬೇರೆ ಯಾವುದಕ್ಕೂ ಮಾಡಿರುವುದಿಲ್ಲ.

7. ಆ ದಿನ ವೆಂಕಟರಾಪ್ಪನ ಮಗ ಏನಾದರೂ ಬಂದಿದ್ದನಾ ಎಂದರೆ ಇಲ್ಲ. ನಾನು ಸಹಿ ಹಾಕಿದ್ದನ್ನು ಬೇರೆ ಯಾರಾದರೂ ನೋಡಿದರಾ ಎಂದರೆ ಅಲ್ಲಿ ಕೂತಿದ್ದವರು ನೋಡಿರುತ್ತಾರೆ. ಅಲ್ಲಿ

ಕೂತಿದವರು ಯಾರು ಯಾರು ಎಂದರೆ ನಾರಾಯಣಪ್ಪ, ವೆಂಕಟರಾಯಪ್ಪ, ಶ್ರೀರಾಮಪ್ಪ ಎಲ್ಲ ಕುಳಿತುಕೊಂಡಿದ್ದರು ಅವರು ನೋಡಿರುತ್ತಾರೆ. ಅವರೆಲ್ಲರೂ ನಾನು ಸಹಿ ಮಾಡಿದ್ದನು ನೋಡಿದರು.

8. ನಿಪಿ 1 ರ ಷರತ್ತುಗಳನ್ನು ನನಗೆ ಯಾರಾದರೂ ಓದಿ ಹೇಳಿದರಾ ಎಂದರೆ ಇಲ್ಲ. ನಿಪಿ 1 ರ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸಹಿ ಹಾಕಿ ಎಂದಿದ್ದಕ್ಕೆ ನಾನು ಸಹಿ ಹಾಕಿದೆ ಎಂದರೆ ಸರಿ.

9. ಜಮೀನಿನ ವಿಸ್ತೀರ್ಣ ನನಗೆ ಗೊತ್ತಾ ಎಂದರೆ ಜಮೀನನ್ನು ನಾನು ನೋಡಿರುತ್ತೇನೆ. ವೆಂಕಟರಾಯಪ್ಪ ವಾದಿಯೂ ಬದುಕಿದ್ದಾರಾ ಎಂದರೆ ಇಲ್ಲ ಸತ್ತು ಹೋಗಿದ್ದಾನೆ. ನನಗೂ ಮತ್ತು ವಾದಿಗೂ ಮೊದಲಿನಿಂದಲೂ ವಿಶ್ವಾಸ ಇದೆ ಎಂದರೆ ಸರಿ. ವಾದಿಯಾ ಆರ್ಥಿಕವಾಗಿ ಸ್ಥಿತಿವಂತನಾಗಿರಲಿಲ್ಲ ಎಂದರೆ ಆತನು ಕೂಲಿ ನಾಲಿ ಮಾಡಿಕೊಂಡು ಇದ್ದ.

10. ವಾದಿಯೂ ಪ್ರತಿವಾದಿಗಳಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಆ ವಿಚಾರೆ ನನಗೆ ಗೊತ್ತಿಲ್ಲ. ನಿಪಿ 1 ನ್ನು ವಾದಿ ಮತ್ತು ನಾವು ಎಲ್ಲರೂ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಪ್ರತಿವಾಯಾಗಲೀ ಅಥವಾ ಅವರ ಮಕ್ಕಳಾಗಲಿ ಸಹಿ ಮಾಡಿಲ್ಲ ಅದನ್ನು ವಾದಿ ಮತ್ತು ನಾವು ನಕಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**–

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.

PW3 is present and is fully cross examined by the defendant counsel. Plaintiff counsel submits no further plaintiff evidence. Hence, plaintiff side evidence is closed.

Case is posted for defendant evidence by 20-09-2025.

**Addl. Civil Judge & JMFC.,**
**Chintamani.**